# ಕಾವಿ ಕಲೆ

## ಆಕರ್ಷಣೆಯ ಸೆಲೆ!

ಅತ್ಯಂತ ಪ್ರಾಚೀನ ಕಾವಿ ಕಲೆ ಇಂದು ಅಳಿವಿನ ಅಂಚಿನಲ್ಲಿದೆ. ನೋಡಲು ಅತ್ಯಂತ ಆಕರ್ಷಕವಾದ ಈ ವಿಭಿನ್ನ ಕಲೆಯನ್ನು ಮಂಗಳೂರಿನ ವೀಣಾ ಶ್ರೀನಿವಾಸ್ ಜೀವಂತವಾಗಿಸಿ ನೋಡುಗರ ಗಮನಸೆಳೆಯುತ್ತಿದ್ದಾರೆ.

■ ಬಳಕೂರು ವಿ.ಎಸ್. ನಾಯಕ




ಮೇಲ್ನೋಟಕ್ಕೆ ವರ್ಲಿ ಕಲೆಯನ್ನೇ ಹೋಲುವ ಆದರೆ ಅದಕ್ಕಿಂತಲೂ ಭಿನ್ನವಾದ ಕಲೆ ಕಾವಿ ಕಲೆ. ನಶಿಸಿಹೋಗುತ್ತಿರುವ ಕಲಾಪ್ರಕಾರಕ್ಕೆ ಸೇರಿದ ಈ ಕಾವಿ ಕಲೆ ನೋಡಲು ಬಹಳ ಅಂದ. ಅತ್ಯಂತ ಪ್ರಾಚೀನವೂ ಆಗಿರುವ ಈ ಕಲೆ ಆಕರ್ಷಕವೂ ಹೌದು.

ಕಲೆ ಎಂಬುದು ಹೇಗೆಲ್ಲಾ ಜನರನ್ನು ಆಕರ್ಷಿಸುತ್ತದೆ ಎಂಬುದಕ್ಕೆ ಈ ಖಾವಿ ಕಲೆ ಸಾಕ್ಷಿ. ಕಲೆಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಮುಂದಾದವರು ಕಲಾವಿದೆ ವೀಣಾ ಶ್ರೀನಿವಾಸ್. ಇವರು ಮಂಗಳೂರಿನ ನಿವಾಸಿ. ಕಾವಿ ಕಲೆಯು 16ನೇ ಶತಮಾನದ ಗೋವಾದಲ್ಲಿ ಹುಟ್ಟಿದ ಕಲೆ.

ಸಾಮಾನ್ಯವಾಗಿ ಸಾರಸ್ವತ ದೇವಾಲಯಗಳು ಮತ್ತು ಮನೆ ಮಠಗಳಲ್ಲಿ ಈ ಕಲೆಯು ಪ್ರಚಲಿತವಾಗಿತ್ತು. ಆದರೆ ವರ್ಷ ಗತಿಸಿದ ಹಾಗೆ ಹೊಸ ಹೊಸ ಕಲಾ ಪ್ರಕಾರಗಳು ಬಂದ ಹಾಗೆ ಈ ಕಲೆಯು ಮರೆಯಾಗುತ್ತಿರುವುದು ವಿಷಾದನೀಯ. ಕಾವಿ ಕಲೆಯನ್ನು ಬೆಲ್ಲದ ಅಂಟು ಮತ್ತು ಸಮುದ್ರದ ದಡದಲ್ಲಿ ಸಿಗುವ ಮರಳನ್ನು ಕೊಳೆ ಹಾಕಿ ನಂತರ ಅದನ್ನು ನುಣುಪಾಗಿ ರುಬ್ಬಿ ಅದರ ಸುಣ್ಣವನ್ನು ತಯಾರಿಸುತ್ತಾರೆ. ಅದಕ್ಕೆ ಬೇಕಾದ ರೀತಿಯಲ್ಲಿ ಕೆಂಪು ಮಣ್ಣನ್ನು ಬಳಸಿ ಈ ಕಲೆಯನ್ನು ಮಾಡುವುದುಂಟು. ಆದರೆ ಇವತ್ತಿಗೂ ಆ ಕಾಲದ ಪ್ರಾಚೀನ ಕಲೆಯನ್ನು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಹಲವಾರು ದೇವಾಲಯಗಳಲ್ಲಿ ಕಾಣಬಹುದು.